# ಮನಸೆಳೆದ ಗೊಂಬೆಗಳ ಪರೇಡ್

## ಕೆ.ಆರ್.ರಸ್ತೆಯಲ್ಲಿ ಮೆರವಣಿಗೆ | ಧಾತು ಅಂತಾರಾಷ್ಟ್ರೀಯ ಗೊಂಬೆಯಾಟ ಉತ್ಸವ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜರ್ಮನಿ, ಆಸ್ಟ್ರಿಯಾ, ರಷ್ಯಾದ ಗೊಂಬೆಗಳ ಜತೆಗೆ ಕರ್ನಾಟಕ, ಪಶ್ಚಿಮ ಬಂಗಾಳ, ಒಡಿಶಾ, ಮಹಾರಾಷ್ಟ್ರ ಮುಂತಾದ ರಾಜ್ಯಗಳ ಗೊಂಬೆಗಳು ಸಿಲಿಕಾನ್ ಸಿಟಿ ರಸ್ತೆಗಳಲ್ಲಿ ಪರೇಡ್ ನಡೆಸಿದವು...! ಮುಖ್ಯರಸ್ತೆಯಲ್ಲಿ ತನ್ನ ಒಡೆಯ-ಒಡತಿಯ ಕೈಯಾಟಕ್ಕೆ ತಕ್ಕಂತೆ ಡಾನ್ಸ್ ಮಾಡುತ್ತ ಈ ಗೊಂಬೆಗಳು ಹೋಗುತ್ತಿದ್ದರೆ ರಸ್ತೆಯಲ್ಲಿ ಹೋಗುವ ಜನರು, ವಾಹನ ಸವಾರರು ಒಮ್ಮೆ ನಿಂತು ಕಣ್ತುಂಬಿಕೊಳ್ಳುತ್ತಿದ್ದರು, ಅಕ್ಕಪಕ್ಕದ ಮನೆಯವರು ಗೇಟಿನ ಹೊರಗೆ ಇಣುಕಿ ನೋಡುತ್ತಿದ್ದರು.

ಇದೇನಿದು? ಗೊಂಬೆಗಳ ಮದುವೆಯಾ ಅಂತ ಆಶ್ಚರ್ಯಪಡಬೇಡಿ, ದೇಶೀಯ ಗೊಂಬೆಗಳ ಜತೆಗೆ ವಿದೇಶದ ಗೊಂಬೆ, ಶಾಸ್ತ್ರೀಯ ಕಲೆಗಳನ್ನು ಪ್ರದರ್ಶಿಸುವ ಮೂಲಕ ಅಳಿವಿನಂಚಿನಲ್ಲಿರುವ ಗೊಂಬೆಯಾಟಕ್ಕೆ ಮರುಜೀವ ನೀಡುವ ಕೆಲಸಕ್ಕೆ ಕೈಹಾಕಿದೆ ಧಾತು ಸಂಸ್ಥೆ. ಅದರ ಭಾಗವಾಗಿ **ವಿಜಯವಾಣಿ** ಮತ್ತು **ದಿಗ್ವಿಜಯ 24x7 ನ್ಯೂಸ್** ಮಾಧ್ಯಮ ಸಹಯೋಗದಲ್ಲಿ ಆಯೋಜಿಸಿರುವ ಅಂತಾರಾಷ್ಟ್ರೀಯ ಗೊಂಬೆಯಾಟ ಉತ್ಸವ ಅಂಗವಾಗಿ ಗುರುವಾರ ಕೆ.ಆರ್. ರಸ್ತೆಯಲ್ಲಿ ಗೊಂಬೆಗಳ ಮೆರವಣಿಗೆ ನಡೆಸಲಾಯಿತು.

ವಿಜಯವಾಣಿ ದಿಗ್ವಿಜಯ 24X7 NEWS DIGHVIJAY ಮಾಧ್ಯಮ ಸಹಯೋಗ

ಗುರುವಾರ ಬೆಳಗ್ಗೆಯಿಂದ ಬೇರೆ ದೇಶ ಮತ್ತು ರಾಜ್ಯಗಳ ಕಲಾವಿದರೊಂದಿಗೆ ಚರ್ಚೆ, ವಿಚಾರವಿನಿಮಯ ಇಟ್ಟುಕೊಳ್ಳಲಾಗಿತ್ತು. ಹಾಗೇ, ದೇಸಿ ಊಟವನ್ನು ಉಣಬಡಿಸಲಾಯಿತು. ಒಟ್ಟು 7 ರಾಜ್ಯ, 4 ದೇಶದ ಕಲಾವಿದರಲ್ಲದೆ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದವರೂ ಸೇರಿ 100ಕ್ಕೂ ಅಧಿಕ ಜನ ಮೆರವಣಿಗೆಯಲ್ಲಿ ತಮ್ಮ ಗೊಂಬೆಗಳನ್ನು ಹಿಡಿದು ಹೆಜ್ಜೆ ಹಾಕಿದರು. ಜನರಲ್ಲಿ ಗೊಂಬೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಈ ರೀತಿಯ ಪರೇಡ್ ನಡೆಸುತ್ತೇವೆ ಎಂದು ಧಾತು ಸಂಸ್ಥೆ ನಿರ್ದೇಶಕಿ ಅನುಪಮಾ ಹೊಸ್ಕೆರೆ ಮಾಹಿತಿ ನೀಡಿದರು.



ವಿಜಯವಾಣಿ ಚಿತ್ರ




ಅಂತಾರಾಷ್ಟ್ರೀಯ ಗೊಂಬೆಯಾಟ ಉತ್ಸವದ ಅಂಗವಾಗಿ ಕೆ.ಆರ್.ರಸ್ತೆಯಲ್ಲಿ ಗೊಂಬೆಗಳ ಮೆರವಣಿಗೆ ನಡೆಯಿತು.

### ಕಲೆಗಳ ವಿನಿಮಯಕ್ಕೆ ವೇದಿಕೆ

ಧಾತು ಗೊಂಬೆಯಾಟ ಉತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಅಂತರವಳ್ಳಿ ಎಂಬ ಊರಿನ ಆರ್.ಎಚ್. ಜೀವನಗೌಡ್ರ ಅವರಿಗೆ ಗೊಂಬೆ ಗೌಡ್ರು ಎಂದೇ ಹೆಸರು. 475 ವರ್ಷಗಳಿಂದ ಸೂತ್ರದ ಗೊಂಬೆಯಾಟದಲ್ಲಿ ತೊಡಗಿಸಿಕೊಂಡಿರುವ ಇವರ ಕುಟುಂಬದವರು ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಮಾತ್ರವಲ್ಲದೆ ಝೆಕೋಸ್ಲೊವಾಕಿಯ, ಇಟಲಿ, ಜರ್ಮನಿ ಮುಂತಾದ 6 ರಾಷ್ಟ್ರಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಇದೇ ಮೊದಲ ಬಾರಿಗೆ ಧಾತು ಸಂಸ್ಥೆಯ ಗೊಂಬೆ ಉತ್ಸವದಲ್ಲಿ ಪಾಲ್ಗೊಂಡಿರುವ ಜೀವನಗೌಡ್ರ ಪರೇಡ್‌ನಲ್ಲಿ ಪೌರಾಣಿಕ ಪಾತ್ರದ ಗೊಂಬೆಗಳನ್ನು ಪ್ರದರ್ಶಿಸಿದರು. ಈ ರೀತಿಯ ಉತ್ಸವದಲ್ಲಿ ಪಾಲ್ಗೊಳ್ಳುವುದರಿಂದ ಬೇರೆ ದೇಶದ ಕಲೆಗಳ ಬಗ್ಗೆ ನಮಗೆ ಹಾಗೂ ಗೊಂಬೆಯಾಟದ ಬಗ್ಗೆ ಅವರಿಗೆ ತಿಳಿದಂತಾಗುತ್ತದೆ. ಇಂತಹವು ಹೆಚ್ಚೆಚ್ಚು ನಡೆಯಬೇಕು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### ಇಂದು ಏನು?

ಶುಕ್ರವಾರ ಗಾಯನ ಸಮಾಜದಲ್ಲಿ ಬೆಳಗ್ಗೆ 10.30ರಿಂದ ಮಕ್ಕಳ ಗೊಂಬೆ ಹಬ್ಬ ಆಯೋಜಿಸಲಾಗಿದೆ. ಸೂತ್ರದ ಗೊಂಬೆಯಾಟದ ಮೂಲಕ ಧರ್ಮವ್ಯಾಧ ಎಂಬ ಪ್ರದರ್ಶನ ನಡೆಯಲಿದ್ದು, ಅನುಪಮಾ ಹೊಸ್ಕೆರೆ ನಿರ್ದೇಶಿಸಿದ್ದಾರೆ. ಸಂಜೆ 6ಕ್ಕೆ ವೇದಿಕೆ ಕಾರ್ಯಕ್ರಮಗಳು ನಡೆಯಲಿದ್ದು, ನವದೆಹಲಿಯ ಸೆಂಟರ್ ಫಾರ್ ಇಂಡಿಯನ್ ಕ್ಲಾಸಿಕಲ್ ಡಾನ್ಸಸ್ ಸಂಸ್ಥಾಪಕ ಅಧ್ಯಕ್ಷ ಡಾ.ಸೋನಾಲ್ ಮಾನ್ ಸಿಂಗ್, ಗಾಯನ ಸಮಾಜದ ಅಧ್ಯಕ್ಷ ಡಾ.ಎಂ.ಆರ್.ವಿ. ಪ್ರಸಾದ್ ಮುಂತಾದವರು ಪಾಲ್ಗೊಳ್ಳಲಿದ್ದಾರೆ. ಇದೇವೇಳೆ ಹಿರಿಯ ಗೊಂಬೆಯಾಟ ಕಲಾವಿದ ಎಂ.ಆರ್. ರಂಗನಾಥ ರಾವ್ ಅವರನ್ನು ಸನ್ಮಾನಿಸಲಾಗುವುದು. ಬಳಿಕ, ಅಭಿಜ್ಞಾನ ಶಾಕುಂತಲಾ ಗೊಂಬೆಯಾಟ ಪ್ರದರ್ಶನವಾಗಲಿದೆ.

